ಭವನ ಕಟ್ಟುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಕನ್ನಡ ಭವನ ಕಟ್ಟಲಿಕ್ಕೆ ಆಯ್ಕೆ ಮಾಡಿದ ಸ್ಥಳ ಯಾವುದು?

ಇ) ಈ ಸೌಂದರ್ಯದ ಕನ್ನಡ ಭವನ ಕಟ್ಟಲಿಕ್ಕೆ ನೀಲಿ ನಕ್ಷೆ ಸಿದ್ಧವಾಗಿದೆಯೇ; ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಉತ್ತರ

ಅ) ಅ. ಇಲ್ಲ

ಆ. ಆದರೆ ಧಾರವಾಡ ನಗರದಲ್ಲಿ ಸಾಂಸ್ಕೃತಿಕ ಸಮುಚ್ಚಯ ನಿರ್ಮಿಸಲು ಉದ್ದೇಶಿಸಲಾಗಿದೆ.

ಆ) ಅ. ಕನ್ನಡ ಭವನಕ್ಕಾಗಿ ಯಾವುದೂ ಇಲ್ಲ.

ಆ. ಆದರೆ ಸಂಸ್ಕೃತಿ ಸಮುಚ್ಚಯ ಕಟ್ಟಡಕ್ಕೆ ಧಾರವಾಡ ನಗರದ ಮಧ್ಯವರ್ತಿ ಸ್ಥಳ: ಸಿಸಿನಂ.115-14-111-02 ಅನ್ನು ಆಯ್ಕೆ ಮಾಡಲಾಗಿದೆ.

ಇ) ಅ. ಇಲ್ಲ

ಆ. ಆದರೆ ಸಾಂಸ್ಕೃತಿಕ ಸಮುಚ್ಚಯ ನೀಲಿ ನಕ್ಷೆ ಸಿದ್ಧವಾಗಿದ್ದು ಒಪ್ಪಿಗೆಗೆ ಪರಿಶೀಲನೆಯಲ್ಲಿದೆ.

ಇ. ಸಾಂಸ್ಕೃತಿಕ ಸಮುಚ್ಚಯದ ಅಂದಾಜು ವೆಚ್ಚ ರೂ.30.98 ಲಕ್ಷಗಳು.

ರಾಜ್ಯದಲ್ಲಿ ಕುಷ್ಟರೋಗ ನಿರ್ಮೂಲನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 237(450)

ಸದಸ್ಯರ ಹೆಸರು: ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ)

ಉತ್ತರಿಸುವ ಸಚಿವರು: ಡಾ॥ ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿರುವ ಕುಷ್ಠರೋಗಿಗಳ ಸಂಖ್ಯೆಯೆಷ್ಟು? ಜಿಲ್ಲಾವಾರು ವಿವರ ಕೊಡುವುದು

ಆ) ಕುಷ್ಠರೋಗ ನಿರ್ಮೂಲನೆಗೆ ಸರ್ಕಾರ ಕೈಗೊಂಡ ವಿಶೇಷ ಯೋಜನೆ ಯಾವುವು?

ಇ) ಕುಷ್ಠರೋಗ ನಿರ್ಮೂಲನೆಗೆ ಕೇಂದ್ರ ಸರ್ಕಾರದಿಂದ ಬಂದ ಅನುದಾನವೆಷ್ಟು? (1999-2000, 2000-2001)

ಈ) ಕುಷ್ಠರೋಗ ನಿರ್ಮೂಲನೆಗೆ ಸರ್ಕಾರ ಜಿಲ್ಲಾವಾರು ವೈದ್ಯರ ಹಾಗೂ ತಜ್ಞರ ಸಮಿತಿಯನ್ನು ರಚಿಸಿದೆಯೆ? ಇಲ್ಲವಾದಲ್ಲಿ ಕಾರಣವೇನು?

ಉತ್ತರ

ಅ) ರಾಜ್ಯದಲ್ಲಿ ನವೆಂಬರ್ 2001ಕ್ಕೆ 13,475 ಕುಷ್ಠರೋಗಿಗಳು ಇದ್ದಾರೆ.

ಬೆಂಗಳೂರು	::	832
ಬೆಂಗಳೂರು ಗ್ರಾಮಾಂತರ	::	215
ಚಿತ್ರದುರ್ಗ	::	133
ದಾವಣಗೆರೆ	::	310
ಕೋಲಾರ	::	636
ಶಿವಮೊಗ್ಗ	::	127
ತುಮಕೂರು	::	218
ಬೆಳಗಾವಿ	::	655
ಬಿಜಾಪುರ	::	607
ಬಾಗಲಕೋಟೆ	::	927
ಧಾರವಾಡ	::	449

ಹಾವೇರಿ	::	420
ಗದಗ	::	318
ಉತ್ತರ ಕನ್ನಡ ಜಿಲ್ಲೆ	::	294
ಬಳ್ಳಾರಿ	::	1457
ಬೀದರ್	::	803
ಗುಲ್ಬರ್ಗಾ	::	2143
ರಾಯಚೂರು	::	943
ಕೊಪ್ಪಳ	::	644
ಚಿಕ್ಕಮಗಳೂರು	::	62
ದಕ್ಷಿಣ ಕನ್ನಡ ಜಿಲ್ಲೆ	::	183
ಉಡುಪಿ	::	151
ಕೊಡಗು	::	09
ಹಾಸನ	::	47
ಮಂಡ್ಯ	::	197
ಮೈಸೂರು	::	297
ಚಾಮರಾಜನಗರ	::	398

ಆ) ಭಾರತ ಸರ್ಕಾರದ ಸಹಾಯದಿಂದ ಮಾರ್ಪಾಡಿತ ಕುಷ್ಠರೋಗ ನಿರ್ಮೂಲನಾ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಆಂದೋಲನವು ಜನಸಂಖ್ಯಾ ಸಮೀಕ್ಷೆ, ಶಿಕ್ಷಣ ನೀಡುವಿಕೆ, ತಾವಾಗಿ ಕೇಂದ್ರಕ್ಕೆ ಹೋಗುವುದು. ಸಂಶಯಾಸ್ಪದ ಕುಷ್ಠರೋಗಿಗಳನ್ನು ಪತ್ತೆ ಹಚ್ಚುವುದು. ತಜ್ಞರಿಂದ ದೃಢೀಕರಣ. ಅಗತ್ಯ ಚಿಕಿತ್ಸೆ ಇತ್ಯಾದಿಯಾಗಿರುತ್ತದೆ.

ಇ) ವರ್ಷ ಬಿಡುಗಡೆ (ರೂ.ಲಕ್ಷಗಳಲ್ಲಿ)

1999-2000 64.50

2000-2001 55.18

ಈ) ಸರ್ಕಾರವು ಜಿಲ್ಲಾವಾರು ಕುಷ್ಠರೋಗ ಸಂಘಗಳನ್ನು ರಚಿಸಿದೆ. ಇದರಲ್ಲಿ ವೈದ್ಯರು ಹಾಗೂ ತಜ್ಞರು ಸದಸ್ಯರಾಗಿರುತ್ತಾರೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 238(452)

ಸದಸ್ಯರ ಹೆಸರು: ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ)

ಉತ್ತರಿಸುವ ಸಚಿವರು: ಶ್ರೀ ಎಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು)

ಪ್ರಶ್ನೆ

1. ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿರುವ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳೆಷ್ಟು? (ಕನ್ನಡ ಮತ್ತು ಭಾಷಾ ಅಲ್ಪ ಸಂಖ್ಯಾತರು ಸೇರಿ).

2. ಸ್ವಂತ ಕಟ್ಟಡಗಳಿದ್ದ ಶಾಲೆಗಳೆಷ್ಟು? ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಶಾಲೆಗಳೆಷ್ಟು?

3. ಮಕ್ಕಳ ಹಾಜರಾತಿ ಅನುಗುಣವಾಗಿ ಶಾಲಾ ಕೊಠಡಿಗಳು ಇವೆಯೇ? ಅಥವಾ ಕೊಠಡಿಗಳ ಕೊರತೆ ಇದೆಯೇ?

4. ಕೊರತೆ ಇರುವ ಕೊಠಡಿಗಳನ್ನು ಕಟ್ಟಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

5. ಬಂದಿದ್ದಲ್ಲಿ ಕೈಗೊಂಡ ಕ್ರಮವೇನು?